## ಹೊತ್ತಿ ಆರಿದ ವಿವಾದದ ಕಿಡಿಗಳು

ಸಿನಿಮಾರಂಗ ಅಂದ ಮೇಲೆ ವಿವಾದಗಳು ಮಾಮೂಲು. 2019ರ ಮೊದಲರ್ಧದಲ್ಲಿಯೂ ಅಷ್ಟೆ. ಭಿನ್ನ ಚಿತ್ರಗಳು, ಹಿಟ್ ಸಿನಿಮಾಗಳನ್ನು ಬೆಳೆಯ ಜೊತೆಜೊತೆಗೇ ವಿವಾದಗಳ ಕಳೆಯೂ ಸುದ್ದಿಮಾಡಿವೆ.

### ಸೂಜಿದಾರದ ರಾದ್ಧಾಂತ

ನಿರ್ದೇಶಕ ಮೌನೇಶ ಬಡಿಗೇರ್ ಅವರ 'ಸೂಜಿದಾರ' ಸಿನಿಮಾಗೆ ಮೆಚ್ಚುಗೆಯ ದಾರದ ಜೊತೆಗೆ ವಿವಾದದ ಸೂಜಿಯೂ ತಳಕುಹಾಕಿಕೊಂಡಿತು. ಸಿನಿಮಾ ಬಿಡುಗಡೆಯಾದ ಮೂರನೇ ದಿನವೇ ನಾಯಕಿ ಹರಿಪ್ರಿಯಾ 'ನನಗೆ ಹೇಳಿದ್ದ ಕಥೆಯೇ ಬೇರೆ. ಮಾಡಿರುವುದೇ ಬೇರೆ. ರಂಗಭೂಮಿ ಕಲಾವಿದರಿಗೆ ಪ್ರೋತ್ಸಾಹ ಕೊಡಬೇಕು ಎಂದು ಒಪ್ಪಿಕೊಂಡೆ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಬರೆದುಕೊಂಡರು. ನಿರ್ದೇಶಕ ಮೌನೇಶ ಬಡಿಗೇರ್ ಅವರೂ 'ಇಡೀ ಸ್ಕ್ರಿಪ್ಟ್ ಅವರಿಗೆ ಹೇಳಲಾಗಿತ್ತು. ಬೇರೆ ಕಲಾವಿದರ ಕುರಿತು ಮೆಚ್ಚುಗೆ ವ್ಯಕ್ತವಾಗುತ್ತಿರುವುದಕ್ಕೆ ಹರಿಪ್ರಿಯಾ ಹೀಗೆ ಮಾತಾಡುತ್ತಿರಬೇಕು' ಎಂದರು. ಇಷ್ಟಕ್ಕೆ ನಿಲ್ಲದೇ ಚಿತ್ರತಂಡ 'ಹರಿಪ್ರಿಯಾ ಅವರಿಂದ ನಮಗೆ ತೊಂದರೆಯಾಗಿದೆ' ಎಂದು ವಾಣಿಜ್ಯ ಮಂಡಳಿಗೆ ದೂರನ್ನೂ ಕೊಟ್ಟಿತು. ವಿವಾದ ತಣ್ಣಗಾಗುವ ಹೊತ್ತಿಗೆ ಸಿನಿಮಾವೂ ಚಿತ್ರಮಂದಿರಗಳಿಂದ ಎತ್ತಂಗಡಿಯಾಗಿತ್ತು.

### ನಕಲಿ ಪದ್ಮಿನಿ

ಏಪ್ರಿಲ್ ಅಂತ್ಯಕ್ಕೆ ಬಿಡುಗಡೆಗೊಂಡ ರಮೇಶ್ ಇಂದಿರಾ ನಟನೆಯ 'ಪ್ರೀಮಿಯರ್ ಪದ್ಮಿನಿ' ಕೂಡ ತನ್ನ ಓಟದ ದಾರಿಯಲ್ಲಿ ವಿವಾದದ ದೂಳೆಬ್ಬಿಸಿತು. 'ಚಿತ್ರದಲ್ಲಿ ಕಥೆ, ಚಿತ್ರಕಥೆ ಎಲ್ಲವೂ ರಮೇಶ್ ಇಂದಿರಾ ಹೆಸರಿನಲ್ಲಿದೆ. ಆದರೆ ಇದು ನನ್ನ 'ನಂಜುಂಡಿ' ಎಂಬ ಪ್ರಬಂಧದಿಂದ ನಕಲುಮಾಡಿದ್ದು' ಎಂದು ವಸುಧೇಂದ್ರ, 'ಸುಧಾ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಆರೋಪಿಸಿದರು. ಇದು ಸಾಮಾಜಿಕ ಜಾಲತಾಣಗಳಲ್ಲಿ ವಿವಾದದ ಬಿರುಗಾಳಿಯೆಬ್ಬಿಸಿತು. ಚಿತ್ರದ ನಿರ್ಮಾಪಕಿ ಶ್ರುತಿ ನಾಯ್ಡು ಮೊದಲಿಗೆ ಇದು ಚಿತ್ರದ ಯಶಸ್ಸನ್ನು ಸಹಿಸಿಕೊಳ್ಳಲಾಗದೆ ಆಡುತ್ತಿರುವ ಮಾತು. ವಸುಧೇಂದ್ರ ಅವರ ಪ್ರಬಂಧಕ್ಕೆ ನಾವು ಪ್ರಚಾರ ಕೊಡುತ್ತಿದ್ದೇವೆ ಎಂಬರ್ಥದ ಮಾತನಾಡಿದರು. ಅವರ ಮಾತುಗಳಿಗೆ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಆ ಪೋಸ್ಟ್ ಅನ್ನು ಅಳಿಸಿ, ತಮ್ಮ ಧ್ವನಿ ಬದಲಿಸಿಕೊಂಡು 'ಇದು ಸ್ಫೂರ್ತಿ, ನಕಲು ಅಲ್ಲ. ನಮಗೆ ವಸುಧೇಂದ್ರ ಅವರ ಬಗ್ಗೆ ಸಾಕಷ್ಟು ಗೌರವ ಇದೆ' ಎಂದರು. ಹೀಗೆ ಎದ್ದಷ್ಟೇ ಬೇಗ ಈ ವಿವಾದ ತಣ್ಣಗಾಯಿತು. ನಿರ್ದೇಶಕ ರಮೇಶ್ ಇಂದಿರಾ ಮಾತ್ರ ಈ ವಿವಾದದ ಕುರಿತು ಉತ್ತರಿಸುವ ಗೋಜಿಗೇ ಹೋಗಲಿಲ್ಲ.

ಇದನ್ನು ಹೊರತುಪಡಿಸಿದರೆ 'ಕವಚ' ಸಿನಿಮಾ ಬಿಡುಗಡೆ ಸಂದರ್ಭದಲ್ಲಿ ಶಿವಣ್ಣ 'ಮಾಧ್ಯಮಗಳು ಬರೀ ಚುನಾವಣಾ ಸುದ್ದಿಗಳಿಗೆ ಇಡೀದಿನ ಮೀಸಲಿಡುತ್ತವೆ. ಸಿನಿಮಾಗೂ ದಿನಕ್ಕೆ ಒಂದು ಗಂಟೆಯಾದರೂ ಮೀಸಲಿಡಿ' ಎಂದು ಹೇಳಿದ್ದು ಒಂದಿಷ್ಟು ಚರ್ಚೆಗೆ ಗ್ರಾಸವಾಯ್ತು.

ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಯಶ್ ಮತ್ತು ದರ್ಶನ್ ಸುಮಲತಾ ಬೆಂಬಲಕ್ಕೆ ನಿಂತಿದ್ದು 'ಜೋಡೆತ್ತು'ಗಳ ಪರಾಕ್ರಮ ಮೆರೆದಿದ್ದೂ ಈ ವರ್ಷದ ಮೊದಲರ್ಧದ ಬಹುಚರ್ಚಿತ ವಿಷಯಗಳಲ್ಲೊಂದು. 'ಜೋಡೆತ್ತು' 'ಎಲ್ಲಿದ್ದೀಯಾ ನಿಖಿಲ್' ಎಂಬ ಟೈಟಲ್‌ಗಳು ಈಗಾಗಲೇ ನೋಂದಣಿ ಆಗಿರುವುದೂ ಈ ಚರ್ಚೆಯ ಕಾವನ್ನು ಸೂಚಿಸುವಂತಿದೆ.

2019: ಸಮೀಕ್ಷೆ-ನಿರೀಕ್ಷೆ



'ಕವಲುದಾರಿ' ಸಿನಿಮಾದಲ್ಲಿ ಅನಂತ್‌ನಾಗ್

ಹುಡುಗಿಯಾಗಿ ಹರಿಪ್ರಿಯಾ ಪಾತ್ರದ ಒಗ್ಗರಣೆಯನ್ನೂ ಸೇರಿಸಿ ಬಡಿಸಿದ ಈ ಭೋಜನವನ್ನು ಈಗಲೂ ಪ್ರೇಕ್ಷಕ ಚಿತ್ರಮಂದಿರಗಳಲ್ಲಿ ಸವಿಯುತ್ತಿದ್ದಾನೆ. ಪ್ರಾಮಾಣಿಕ ಅಧಿಕಾರಿ ಎಂದು ಹೆಸರು ಗಳಿಸಿದ್ದ ಡಿ.ಕೆ. ರವಿ ಅವರ ಬದುಕನ್ನು ಆಧರಿಸಿದ 'ಚಂಬಲ್' ಸಿನಿಮಾ ಬಿಡುಗಡೆಯಾಗಿದ್ದೂ ಇದೇ ತಿಂಗಳಲ್ಲಿ. 'ಪೃಥ್ವಿ'ಯಂಥ ಉಜ್ವಲ ಸಿನಿಮಾ ನಿರ್ದೇಶಿಸಿದ್ದ ಜೇಕಬ್ ವರ್ಗೀಸ್ ಆ್ಯಕ್ಷನ್ ಕಟ್ ಹೇಳಿದ್ದ 'ಚಂಬಲ್'ನಲ್ಲಿ ನೀನಾಸಂ ಸತೀಶ್ ನಾಯಕನಾಗಿ ನಟಿಸಿದ್ದರು. ಈ ಚಿತ್ರ ಗೆಲುವಿನ ಶಿಖರ ಮುಟ್ಟದಿದ್ದರೂ ವಿಮರ್ಶಕರಿಂದ ಮೆಚ್ಚುಗೆಯ ಮಾತುಗಳನ್ನಂತೂ ಗಳಿಸಿಕೊಂಡಿತು.

### ಯಜಮಾನನ ಆಟ

ನಟ ದರ್ಶನ್ ಅಭಿನಯದ ವರ್ಷದ ಬಹುನಿರೀಕ್ಷಿತ ಚಿತ್ರಗಳಲ್ಲೊಂದಾದ 'ಯಜಮಾನ'ದ ಮೂಲಕ ಆರಂಭವಾದ ಮಾರ್ಚ್, ವರ್ಷದ ಮೊದಲರ್ಧದಲ್ಲಿ ಅತಿ ಹೆಚ್ಚು ಸಿನಿಮಾ ಬಿಡುಗಡೆಯಾದ ತಿಂಗಳೂ ಹೌದು. ಸರಿಯಾಗಿ ಎರಡು ವರ್ಷಗಳ ನಂತರ ಬಾಕ್ಸ್ ಆಫೀಸ್ ಸುಲ್ತಾನ್, ತೆರೆಯಮೇಲೆ 'ಯಜಮಾನ'ನಾಗಿ ವಿರಾಜಿಸಿದಾಗ ಪ್ರೇಕ್ಷಕ ಚೆನ್ನಾಗಿಯೇ ವಿಷಲ್ ಹೊಡೆದ. ಅಭಿಮಾನಿಗಳ ಚಪ್ಪಾಳೆಯ ಸದ್ದು ತುಂಬ ದಿನಗಳ ಕಾಲ ಟಾಕೀಸ್‌ನಲ್ಲಿ ಮೊಳಗಲಿಲ್ಲವಾದರೂ ನಿರ್ಮಾಪಕರು ಗೆಲುವಿನ ನಗೆ ಬೀರಿದ್ದಂತೂ ನಿಜ.

ಮಾರ್ಚ್‌ನಲ್ಲಿ ಒಟ್ಟು 26 ಸಿನಿಮಾಗಳು ಬಿಡುಗಡೆಯಾದವು. 'ಯಜಮಾನ' ಬಿಟ್ಟರೆ ಅವುಗಳಲ್ಲಿ ಉಲ್ಲೇಖಿಸಬಹುದಾಗಿದ್ದು ಯೋಗರಾಜ ಭಟ್ ಅವರ 'ಪಂಚತಂತ್ರ' ಮತ್ತು ಸುನೀಲ್ ಕುಮಾರ್ ದೇಸಾಯಿ ಅವರ 'ಉದ್ಘರ್ಷ'. ಪಂಚತಂತ್ರದ ಆಮೆ–ಮೊಲದ ಕಥೆಯನ್ನು ಇಟ್ಟುಕೊಂಡು ಎರಡು ಪೀಳಿಗೆಗಳ ನಡುವಿನ ಘರ್ಷಣೆಯನ್ನು ಇಟ್ಟುಕೊಂಡು ಹೆಣೆದ ಈ ಚಿತ್ರ ಆರಕ್ಕೇರದೆ ಮೂರಕ್ಕಿಳಿಯದೆ ಒಂದಿಷ್ಟು ದಿನ ಮಲ್ಟಿಪ್ಲೆಕ್ಸ್ ರೇಸ್‌ನಲ್ಲಿ ಓಡಿತು. 'ಉತ್ಕರ್ಷ', 'ನಿಷ್ಕರ್ಷ'ದಂಥ ಸಿನಿಮಾಗಳನ್ನು ಕೊಟ್ಟಿದ್ದ ಸಸ್ಪೆನ್ಸ್ ಥ್ರಿಲ್ಲರ್ ಸ್ಪೆಷಲಿಸ್ಟ್ ಸುನೀಲ್ ಕುಮಾರ್ ದೇಸಾಯಿ ಅವರ 'ಉದ್ಘರ್ಷ'ದ ಕುರಿತೂ ಕುತೂಹಲವಿತ್ತು. ಮೂರು ಭಾಷೆಗಳಲ್ಲಿ ನಿರ್ಮಾಣವಾದ ಈ ಚಿತ್ರ, ದೇಸಾಯಿ ಅಧ್ಯಾಯ ಮುಗಿದಿದೆ ಎನ್ನುವುದನ್ನು ಮತ್ತೊಮ್ಮೆ ಸಾಬೀತುಮಾಡಿತಷ್ಟೆ.

